# ಭಾರತೀದೇವಿ ತಾಯೆ ನೀ ಕಾಯೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 420.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 141.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. **Note:** Lyrics given here are as per Ref. 1. The wordings in Ref. 2 are same as in Ref. 1.
5. **Note:** Singer has followed these wordings.

ರಾಗ: ಕೇದಾರಗೌಳ ತಾಳ: ಅಟ

ಭಾರತೀದೇವಿ ತಾಯೆ ನೀ ಕಾಯೆ
ಮಾರುತನ ರಾಣಿಯೆ || ಪ ||

ಸೇರಿದೆ ನಿನ್ನ ಪಾದ ಸೇವಕನೆನಿಸಮ್ಮ || ಅಪ ||

ಪನ್ನಗೇಶ ಸುಪರ್ಣ ಪನ್ನಗ ಭೂಷಣ
ಚಿನ್ನುಮಯ ಸುರರಿಂ ಸೇವಿತೆ
ಘನ್ನ ಮಹಿಮಳೆ ಇನ್ನೇನ ಬಣ್ಣಿಪೆ
ನಿನ್ನ ಪತಿಗೆ ಬಿನ್ನವಿಸೆನ್ನನುದ್ಧರಿಸಮ್ಮ || 1 ||

ಮುಕ್ತಾಮುಕ್ತರೊಡೆಯಳೆ ತತ್ವಾಭಿಮಾನಿ
ರಕ್ತಶುಕ್ಲ ಸಂಬಂಧತನು ದೂರಳೆ
ಉತ್ತಮ ಗುಣನಿಧಿ ಶ್ರೀಶನ ಭಜಿಪಳೆ
ಚಿತ್ತ ಬಂದಂತೆನ್ನ ಭೃತ್ಯನೆಂದೆಣಿಸಮ್ಮ || 2 ||

ಮತ್ತೊಂದು ಅನ್ಯಾಶ್ರಯವು ನೋಡಿದರಿಲ್ಲ
ಇತ್ತ ಬಾರೆಂತೆಂದು ಕರೆವರಿಲ್ಲ
ಚಿತ್ತಜನಯ್ಯ ಶ್ರೀ ಪುರಂದರವಿಠಲನ
ಭೃತ್ಯರ ಭೃತ್ಯರ ಭೃತ್ಯನಂದೆಣಿಸಮ್ಮ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಪನ್ನಗೇಶ ಸುಪರ್ಣ ಪನ್ನಗಭೂಷಣ** – ಶೇಷ, ಗರುಡ, ರುದ್ರರು; ಒಂದೇ ಕಕ್ಷೆಯಲ್ಲಿರುವ (ಐದನೆಯದು) ತತ್ತ್ವಾಭಿಮಾನಿ ದೇವತೆಗಳು; ಇವರಿಗಿಂತ ಮೇಲಿನ (ನಾಲ್ಕನೆಯ) ಕಕ್ಷೆಯಲ್ಲಿರುವ ಭಾರತೀದೇವಿಗೆ ಅವರರು, ಆದುದರಿಂದ ಅವಳನ್ನು ಸೇವಿಸುವರು.

**ಚಿನ್ನುಮಯ** – ಚಿನ್ಮಯ.

**ನಿನ್ನ ಪತಿಗೆ** – ಭಾರತಿಗಿಂತ ಮೇಲಿನ ಕಕ್ಷೆಯಲ್ಲಿರುತ್ತ, ಸರ್ವಜೀವೋತ್ತಮನಾದ, ಹರಿಯ ಅನುಜ್ಞೆಯಿಂದ ಮೋಕ್ಷಪ್ರದನಾದ, ವಾಯುದೇವರಿಗೆ.

**ಮುಕ್ತಾಮುಕ್ತರೊಡೆಯಳೆ** – ಜೀವರಲ್ಲಿ ಮುಕ್ತರು, ಬದ್ಧರು (ಅಮುಕ್ತರು) ಎಂದೆರಡು ವಿಭಾಗ. ಇಬ್ಬರಿಗೂ ಭಕ್ತಿ ಪ್ರಧಾನ ಸಾಧನವಾದುದರಿಂದ, ಭಕ್ತಿದಾಯಕಳು ಭಾರತೀದೇವಿಯಾದ್ದರಿಂದ ಒಡೆಯಳು.

**ರಕ್ತ ಶುಕ್ಲ ಸಂಬಂಧ ತನುದೂರಳೆ** – ಪ್ರಾಕೃತ ಗುಣಗಳಿಂದ ಒದಗುವ ಶರೀರದ ಸಂಬಂಧವನ್ನು ಬಿಟ್ಟವಳು; ತತ್ತ್ವಾಭಿಮಾನಿ ದೇವತೆಗಳ ದೇಹವು ಅವರವರ ಯೋಗ್ಯತೆಗೆ ತಕ್ಕಂತೆ ಶುದ್ಧ ಸತ್ತ್ವದಿಂದ ನಿರ್ಮಾಣವಾಗುತ್ತದೆ. ಶುದ್ಧ ಸತ್ತ್ವವೆಂದರೆ ಮಹತ್ತತ್ತ್ವ. ಅದರಿಂದ ಒದಗುವ ಅಹಂಕಾರ ತತ್ತ್ವದಲ್ಲಿ ಶುಕ್ಲ, ರಕ್ತ, ಕೃಷ್ಣ ಎಂಬ ಗುಣವಿಭಾಗವಿದೆ. ಶುಕ್ಲಾಣುಗಳಿಂದ ಬುದ್ಧಿ ಮತ್ತು ಮನಸ್ಸು, ರಕ್ತಾಣುಗಳಿಂದ ಹತ್ತು ಇಂದ್ರಿಯಗಳು ಸಿದ್ಧವಾಗುತ್ತವೆ. ಭಾರತೀದೇವಿಯರ ಶರೀರವು ಈ ಅಧಿಷ್ಠಾನದ ಅಗತ್ಯವಿಲ್ಲದ್ದು.

**ಉತ್ತಮ ಗುಣನಿಧಿ** – ಸಕಲ ಕಲ್ಯಾಣ ಗುಣಗಳಿಂದ ಪೂರ್ಣನಾದ.

**ಚಿತ್ತಜನಯ್ಯ** – ಮನ್ಮಥನ ತಂದೆ.

**Classification:** Mundige

**Ankita:** sri purandara vittala

**Location:** NA

**Category:** Hanuma Stuti,

**Sub-Category:** Bharati, hanuma, arasi, rama, pati, bhajane, chitta,

**Pravachana:** NA

**Explanation:** NA